Online Newspaper Clipping Service
**Dtd- Sunday, 27th, January- 2019**

DECCAN HERALD



# Woman dies after eating prasada, 11 in hospital

BENGALURU, DHNS: Just a month after 12 people died after consuming temple prasada in Chamarajanagar, one person died and 11 were admitted to hospitals after eating prasada at a temple in Chintamani in Chikkaballapur district on Friday.

The deceased has been identified as Kavitha (28), a homemaker. Among the 11, including two children and five women, who were admitted to hospitals in Chintamani and Kolar are Kavitha's two children Ganavi and Sharani, her husband Gangadhar V and his father Venkataramappa. All of them are said to be out of danger and will be under observation.

According to the police, around 2,000 people attended Friday night's puja from 6 pm to 9 pm at the Gangamma temple in Chintamani's Narasimhapete. Preliminary inquiries revealed that kesari bath was distributed to around 500 visitors. Kavitha's family members, Narayanamma and Raja had taken the prasada home, and consumed it at night after distributing it to a family in the neighbourhood and a woman friend Saraswathamma.

After consuming the prasada, all of them started vomiting and complained of abdominal pain. A few of them had loose motions after which they were rushed to hospitals.

Kavitha had severe vomiting and was dehydrated. She stopped responding to treatment in the morning and was declared dead, the police said, quoting the doctors.



Doctors at the R L Jalappa Hospital in Kolar attend to a boy who fell ill after consuming prasada at temple in Chintamani on Friday. DH PHOTO

The police visited the Gangamma temple and questioned the priests who told the police that the kesari bath was not prepared at the temple but was brought by some devotees who had taken a vow and they would offer it to devotees. The prasada samples have been sent to Forensic Science Laboratory in Bengaluru.

Investigation reveals there was no foul play. It is suspected that the ingredients in the prasada were stale and the portion that the victims took home caused food poisoning. Kavitha's death, the doctors say, was caused by extreme dehydration.

### ಮಹಿಳೆಯೊಬ್ಬರಿಂದ ಕೇಸರಿ ಬಾತ್ ವಿತರಣೆ • 12 ಜನ ಅಸ್ವಸ್ಥ

# ಪ್ರಸಾದ ಸೇವಿಸಿ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಚಿಂತಾಮಣಿ ನಗರದ ನಾರಸಿಂಹಪೇಟೆಯ ಗಂಗಮ್ಮ ದೇವಾಲಯದಲ್ಲಿ ಶುಕ್ರವಾರ ಸಂಜೆ ಭಕ್ತರೊಬ್ಬರು ವಿತರಣೆ ಮಾಡಿದ್ದ ಪ್ರಸಾದ ಸೇವಿಸಿ ಒಬ್ಬ ಮಹಿಳೆ ಮೃತಪಟ್ಟಿದ್ದು, 12 ಜನರು ಅಸ್ವಸ್ಥಗೊಂಡು ವಿವಿಧ ಆಸ್ಪತ್ರೆಗಳಲ್ಲಿ ದಾಖಲಾಗಿದ್ದಾರೆ.



ಕವಿತಾ

ಶುಕ್ರವಾರ ಸಂಜೆ ಮಹಿಳೆಯೊಬ್ಬರು ವಿತರಿಸಿದ ಪ್ರಸಾದ (ಕೇಸರಿ ಬಾತ್) ಸೇವನೆಯಿಂದ ಈ ದುರಂತ ನಡೆದಿದೆ.

ಶ್ರೀರಾಮನಗರದ ರಾಜು ಮತ್ತು ನಾರಾಯಣಮ್ಮ ಎಂಬುವವರ ಎರಡು ಕುಟುಂಬಗಳ 10 ಮಂದಿ ಸೇರಿದಂತೆ 13 ಜನರಲ್ಲಿ ಹೊಟ್ಟೆನೋವು, ವಾಂತಿ ಕಾಣಿಸಿಕೊಂಡಿತ್ತು.

ರಾಜು ಕುಟುಂಬದವರು ಚಿಂತಾಮಣಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ನಸುಕಿನಲ್ಲಿ ಕೋಲಾರದ ಎಸ್‌ಎನ್‌ಆರ್ ಆಸ್ಪತ್ರೆಗೆ ದಾಖಲಾಗಿದ್ದರು. ಅಲ್ಲಿಯೂ ಸ್ಥಿತಿ ಬಿಗಡಾಯಿಸುತ್ತಿದ್ದಂತೆ ಅವರನ್ನು ಆರ್.ಎಲ್.ಜಾಲಪ್ಪ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಜಾಲಪ್ಪ ಆಸ್ಪತ್ರೆಗೆ ದಾಖಲಾದ ಕೆಲ ಹೊತ್ತಿಗೆ ರಾಜು ಅವರ ಸಹೋದರ ಗಂಗಾಧರ್ ಅವರ ಪತ್ನಿ ಕವಿತಾ (28) ಮೃತಪಟ್ಟರು.

ಜಾಲಪ್ಪ ಆಸ್ಪತ್ರೆಯ ಐಸಿಯುನಲ್ಲಿ ಗಂಗಾಧರ್ ಮತ್ತು ಅವರ ಮಕ್ಕಳಾದ ಗಾನವಿ (7), ಶರಣ್ಯ (5), ರಾಜು, ಅವರ ಪತ್ನಿ ರಾಧಾ (25), ಶಿಡ್ಲಘಟ್ಟ ತಾಲ್ಲೂಕಿನ ಗಡಿಮುಂಚೇನಹಳ್ಳಿಯ ನಿವಾಸಿ ಸರಸ್ವತಮ್ಮ ದಾಖಲಾಗಿದ್ದಾರೆ.

**ವಿಚಾರಣೆ:** ಚಿಂತಾಮಣಿ ನಗರ ಠಾಣೆ ಪೊಲೀಸರು, ಅರ್ಚಕರು ಹಾಗೂ ದೇವಾಲಯದ ಕಸ ಗುಡಿಸುವವರು, ಕೆಲ ಮಹಿಳೆಯರು ಸೇರಿದಂತೆ ಸುಮಾರು 12 ಜನರನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

**ವಿಷ ಬೆರೆತಿರುವ ಸಾಧ್ಯತೆ ಇಲ್ಲ:** 'ಭಕ್ತರು ಸೇವಿಸಿದ ಪ್ರಸಾದದಲ್ಲಿ ವಿಷ ಬೆರೆತಿರುವ ಸಾಧ್ಯತೆ ಇಲ್ಲ' ಎಂದು ಆರ್.ಎಲ್. ಜಾಲಪ್ಪ ಆಸ್ಪತ್ರೆ ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಎಂ.ಎಸ್. ಲಕ್ಕಯ್ಯ 'ಪ್ರಜಾವಾಣಿ'ಗೆ ತಿಳಿಸಿದರು.

## ಪ್ರಸಾದ ತಯಾರಿಕೆಗೆ ಮಾರ್ಗಸೂಚಿ: ಸಿ.ಎಂ

ಬೆಂಗಳೂರು: ದೇವಸ್ಥಾನಗಳಲ್ಲಿ ಪ್ರಸಾದ ತಯಾರಿಕೆ ಮತ್ತು ವಿತರಣೆಗೆ ಸಂಬಂಧಿಸಿದಂತೆ ಮಾರ್ಗಸೂಚಿ ಹೊರಡಿಸುವ ಅಗತ್ಯವಿದೆ ಎಂದು ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹೇಳಿದರು. ಪದೇ ಪದೇ ಇಂತಹ ದುರಂತ ನಡೆಯುತ್ತಿದ್ದು, ಮುನ್ನೆಚ್ಚರಿಕೆ ತೆಗೆದುಕೊಳ್ಳುವ ಉದ್ದೇಶದಿಂದ ಅಧಿಕಾರಿಗಳ ಜತೆ ಚರ್ಚಿಸಿ, ಕ್ರಮಕ್ಕೈಗೊಳ್ಳುವುದಾಗಿ ತಿಳಿಸಿದರು.

## ಮಹಿಳೆ ಪೊಲೀಸ್ ವಶಕ್ಕೆ

'ಗಂಗಮ್ಮದೇವಿಗೆ ಹರಕೆ ಹೊತ್ತಿದ್ದ ಸ್ಥಳೀಯ ನಿವಾಸಿ ಲಕ್ಷ್ಮೀ ಎಂಬುವವರು ಮನೆಯಲ್ಲಿ ಪ್ರಸಾದ ಸಿದ್ಧಪಡಿಸಿಕೊಂಡು ದೇವಾಲಯಕ್ಕೆ ಬಂದಿದ್ದರು. ಅವರ ಮನೆಯಲ್ಲಿ ಕೆಲಸ ಮಾಡುವ ಅಮರಾವತಿ ಎಂಬುವವರು ಭಕ್ತರಿಗೆ ಪ್ರಸಾದ ಹಂಚಿದ್ದರು. ಅವರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಲಾಗಿದೆ. ವಿಧಿವಿಜ್ಞಾನ ಪ್ರಯೋಗಾಲಯದ ವರದಿಗಾಗಿ ಕಾಯುತ್ತಿದ್ದೇವೆ' ಎಂದು ಎಸ್ಪಿ ಕಾರ್ತಿಕ್ ರೆಡ್ಡಿ ತಿಳಿಸಿದರು.

ಪ್ರಜಾವಾಣಿ





ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿಯ ಗಂಗಮ್ಮ ದೇವಸ್ಥಾನದ ಪ್ರಸಾದ ಸೇವಿಸಿ ಅಸ್ವಸ್ಥಗೊಂಡು ಕೋಲಾರದ ಆರ್‌ಎಲ್‌ಜಾಲಪ್ಪ ಆಸ್ಪತ್ರೆಗೆ ದಾಖಲಾಗಿರುವ ಬಾಲಕಿ ತರನ್ನುಳನ್ನು ವೈದ್ಯರು ಶನಿವಾರ ತಪಾಸಣೆ ಮಾಡಿದರು (ಎಡಚಿತ್ರ). ದೇವಾಲಯದ ಬಳಿ ಜಮಾಯಿಸಿದ ಜನರನ್ನು ಪೊಲೀಸರು ನಿಯಂತ್ರಿಸಿದರು.

SDUAHER

ಕೂಲಿ ಮಾಡುವ ಕುಟುಂಬದ ಕನಸು ಭಗ್ನಗೊಳಿಸಿದ ಗಂಗಮ್ಮ ದೇವಿಯ ಪ್ರಸಾದ, ದೇವರಿಗೂ ಹಿಡಿಶಾಪ

# ಮತ್ತೆ ಭಯ ಮೂಡಿಸಿದ 'ಪ್ರಸಾದ'

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ/ಚಿಂತಾಮಣಿ: ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಸುಳ್ವಾಡಿ ಮಾರಮ್ಮನ ದೇವಾಲಯದಲ್ಲಿ ಪ್ರಸಾದ ಸೇವಿಸಿ 110ಕ್ಕೂ ಹೆಚ್ಚು ಜನರು ಅಸ್ವಸ್ಥಗೊಂಡು 17ಜನರು ಮೃತಪಟ್ಟ ಪ್ರಕರಣ ಮಾಸುವ ಮುನ್ನವೇ, ಜಿಲ್ಲೆಯಲ್ಲಿ ಗಂಗಮ್ಮ ದೇವಿಯ ಪ್ರಸಾದ ಮಹಿಳೆಯೊಬ್ಬರನ್ನು ಬಲಿ ಪಡೆದಿರುವುದು ಜನರಲ್ಲಿ ಆತಂಕ ಮೂಡಿಸಿದೆ.

ಚಿಂತಾಮಣಿ ನಗರದ ಗಜಾನನ ವೃತ್ತದ ಬಳಿಯ ನಾರಸಿಂಹಪೇಟೆಯ ಗಂಗಮ್ಮ ದೇವಾಲಯದಲ್ಲಿ ಶುಕ್ರವಾರ ಮಹಿಳೆ ಒಬ್ಬರು ಭಕ್ತರಿಗೆ ಹಂಚಿದ್ದಾರೆ ಎನ್ನಲಾದ ಪ್ರಸಾದ 13 ಜನರ ಪಾಲಿಗೆ ವಿಷವಾಗಿ ಪರಿಣಮಿಸಿದ್ದು, ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿ, ಅನೇಕರನ್ನು ಸಂಶಯದಿಂದ ವಿಚಾರಣೆಗೆ ಒಳಪಡಿಸುವಂತೆ ಮಾಡಿದೆ.

ದ್ವಿಚಕ್ರವಾಹನದಲ್ಲಿ ಪಕ್ಕದ ಮನೆಯ ರಾಜು ಅವರೊಂದಿಗೆ ದೇವಾಲಯಕ್ಕೆ ಬಂದಿದ್ದ ಶ್ರೀರಾಮನಗರದ ನಾರಾಯಣಮ್ಮ ಅವರು ದೇವಾಲಯದ ಬಳಿ ಮಹಿಳೆಯೊಬ್ಬರು ನೀಡಿದ್ದ ಪ್ರಸಾದವನ್ನು ಎರಡು ಕವರ್‌ಗಳಲ್ಲಿ ತೆಗೆದುಕೊಂಡು ಹೋಗಿದ್ದರು.

ಅದರಲ್ಲಿ ಒಂದನ್ನು ರಾಜು ಅವರಿಗೆ ನೀಡಿದ್ದರು. ಈ ಇಬ್ಬರ ಕುಟುಂಬದವರೂ ರಾತ್ರಿ ಆ ಪ್ರಸಾದ ಸೇವಿಸಿ, ಧನ್ಯತೆ ಮೆರೆಯುವ ಹೊತ್ತಿಗೆ ಹೊಟ್ಟೆನೋವು, ವಾಂತಿ-ಬೇಧಿ ಏಕಕಾಲಕ್ಕೆ ಕಾಣಿಸಿಕೊಂಡು ಸುಮಾರು 10 ಜನರು ನಿತ್ರಾಣಗೊಂಡು ಧಾವಂತದಲ್ಲಿ ಆಸ್ಪತ್ರೆಗಳಿಂದ ಆಸ್ಪತ್ರೆಗಳಿಗೆ ಅಲೆದಾಡಿದರು.

ರಾತ್ರಿ ಕಳೆದು ಬೆಳಗಾಗುವ ಹೊತ್ತಿಗೆ ಕೋಲಾರದ ಆಸ್ಪತ್ರೆಯಲ್ಲಿ ರಾಜು ಅವರ ಸಹೋದರನ ಪತ್ನಿ ಕವಿತಾ ಅವರು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟರೆ, ಅವರ ಇಬ್ಬರು ಪುಟ್ಟ ಮಕ್ಕಳು, ಪತಿ ಸೇರಿದಂತೆ ಕುಟುಂಬದ ಐದು ಜನರು ತುರ್ತು ನಿಗಾ ಘಟಕದ ಒಳಗಿನ ಹಾಸಿಗೆಗಳಲ್ಲಿ ನಿತ್ರಾಣ ಸ್ಥಿತಿಯಲ್ಲಿ ಚಿಕಿತ್ಸೆ ಪಡೆಯುತ್ತ ಮಲಗಿದ್ದರು. ಇನ್ನೊಂದೆಡೆ ಆಸ್ಪತ್ರೆ ಹೊರಗಡೆ ಕವಿತಾ ಅವರ ಸಂಬಂಧಿಗಳ ರೋಧನ ಮುಗಿಲು ಮುಟ್ಟಿತ್ತು.

ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ ಕೂಲಿ ಕೆಲಸ ಮಾಡಿ ಬದುಕುತ್ತಿದ್ದ ಈ ಕುಟುಂಬದ ಕನಸನ್ನು ಗಂಗಮ್ಮ ದೇವಿಯ ಪ್ರಸಾದ ಕಸಿದು ಹಾಕಿದ್ದು, ಕವಿತಾ ಅವರ ಪುಟ್ಟ ಮಕ್ಕಳ ನೆನೆದು ಸೂತಕದ ಮನೆ ಎದುರು ನೆರೆಹೊರೆಯವರು ಮರುಕಪಡುತ್ತ, ಪ್ರಸಾದ ನೀಡಿದವರಿಗೆ, ದೇವರಿಗೆ ಸಹ ಹಿಡಿಶಾಪ ಹಾಕುವ, ಜತೆಗೆ ಉಳಿದವರನ್ನಾದರೂ ಬದುಕಿಸು ಎಂದು ಮೊರೆ ಇಡುತ್ತಿದ್ದ ದೃಶ್ಯ ಕಂಡುಬಂತು.

ಆಸ್ಪತ್ರೆಯಲ್ಲಿ ನಾರಾಯಣಮ್ಮ ಕುಟುಂಬ ನಾರಾಯಣಮ್ಮ ಸಹ ಶುಕ್ರವಾರ ರಾತ್ರಿ ಪ್ರಸಾದ ಸೇವಿಸುವ ಜತೆಗೆ ಮನೆಗೆ ಬಂದಿದ್ದ ತಮ್ಮ ನಾರಸಿಂಹಪೇಟೆ ನಿವಾಸಿ, ಚಿತ್ರಕಲಾವಿದ ವೆಂಕಟರವಣಪ್ಪ ಅವರಿಗೆ ಮತ್ತು ಮಗ ಶಿವಕುಮಾರ್ ಅವರಿಗೆ ಸಹ ತಿನ್ನಲು ನೀಡಿದ್ದರು. ತೀವ್ರ ಹೊಟ್ಟೆನೋವು ಕಾಣಿಸಿಕೊಳ್ಳುತ್ತಿದ್ದಂತೆ ನಾರಾಯಣಮ್ಮ ಮತ್ತು ವೆಂಕಟರವಣಪ್ಪ ಅವರು ನಗರದ ಡೆಕ್ಕನ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾದರು.

ಆದರೆ ಪ್ರಸಾದ ಸೇವಿಸಿದ ಬಳಿಕ ರಾತ್ರಿಯೇ ಚೇಳೂರಿಗೆ ಸಂಬಂಧಿಕರ ಮನೆಗೆ ತೆರಳಿದ್ದ ಶಿವಕುಮಾರ್ ನೋವು ತಾಳಲಾರದೆ ಚೇಳೂರಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆಗೆ ದಾಖಲಾಗಿದ್ದರು. ಶನಿವಾರ ಬೆಳಿಗ್ಗೆ ಅವರು ಸಹ ಡೆಕ್ಕನ್ ಆಸ್ಪತ್ರೆಗೆ ಸ್ಥಳಾಂತರಗೊಂಡರು. ಈ ಎರಡು ಕುಟುಂಬಗಳು ಮಾತ್ರವಲ್ಲದೇ ಇತರ ನಾಲ್ಕು ಜನರಲ್ಲಿ ಸಹ ಪ್ರಸಾದ ತಳಮಳ ಹುಟ್ಟಿಸಿದೆ. ಇದರಿಂದಾಗಿ ಆಸ್ತಿಕ ಸಮೂಹದಲ್ಲಿ ಆತಂಕದ ಜತೆಗೆ ಆಕ್ರೋಶವೂ ಮೂಡಿದೆ.

**ಮುಖ್ಯಾಂಶಗಳು**

- ಆಸ್ತಿಕ ವಲಯದಲ್ಲಿ ಮೂಡಿದ ಭೀತಿ
- ವಿಷ ಪ್ರಸಾದ ನೀಡಿದವರಿಗೆ ಹಿಡಿಶಾಪ
- ಬಡವರ ಮನೆಯಲ್ಲಿ ಮಡುಗಟ್ಟಿದ ಶೋಕ

ಯಾರೂ ಅನಗತ್ಯವಾಗಿ ಊಹಾಪೋಹ ಹರಡಬಾರದು. ಯಾರಿಗಾದರೂ ತೊಂದರೆಯಾದರೆ ಕೂಡಲೇ ಆಸ್ಪತ್ರೆಗೆ ದಾಖಲಾಗಿ, ಯಾವುದೇ ಆತಂಕಕ್ಕೆ ಒಳಗಾಗಬೇಡಿ.
**ಅನಿರುದ್ಧ್ ಶ್ರವಣ್**, ಜಿಲ್ಲಾಧಿಕಾರಿ



ಚಿಂತಾಮಣಿಯ ಡೆಕ್ಕನ್ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವ ನಾರಾಯಣಮ್ಮ

## ಪರಿಹಾರದ ಭರವಸೆ

ಜಾಲಪ್ಪ ಆಸ್ಪತ್ರೆಯಲ್ಲಿ ಅಸ್ವಸ್ಥ ಭಕ್ತರ ಆರೋಗ್ಯ ವಿಚಾರಿಸಿದ ವಿಧಾನಸಭೆ ಉಪ ಸಭಾಪತಿ ಜೆ.ಕೆ.ಕೃಷ್ಣಾರೆಡ್ಡಿ, 'ಮೃತರ ಕುಟುಂಬಕ್ಕೆ ವೈಯಕ್ತಿಕವಾಗಿ ₹ 25 ಸಾವಿರ ಮತ್ತು ಅಸ್ವಸ್ಥರ ಚಿಕಿತ್ಸೆಗೆ ತಲಾ ₹ 5 ಸಾವಿರ ನೀಡುತ್ತೇನೆ. ಸರ್ಕಾರದಿಂದ ಪರಿಹಾರ ಕೊಡಿಸಲು ಮುಖ್ಯಮಂತ್ರಿಯವರ ಜತೆ ಮಾತನಾಡುತ್ತೇನೆ' ಎಂದು ಭರವಸೆ ನೀಡಿದರು.

'ಪ್ರಕರಣ ಸಂಬಂಧ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಮೃತರ ಕುಟುಂಬಕ್ಕೆ ಪರಿಹಾರ ಕಲ್ಪಿಸುತ್ತೇವೆ' ಎಂದು ಸಂಸದ ಕೆ.ಎಚ್.ಮುನಿಯಪ್ಪ ಹೇಳಿದರು.

## ಪ್ರಸಾದಕ್ಕೆ ವಿಷ ಬೆರೆತಿದೆಯೇ?

ಘಟನೆ ಬೆಳಕಿಗೆ ಬರುತ್ತಿದ್ದಂತೆ ಸಾರ್ವಜನಿಕ ವಲಯದಲ್ಲಿ, 'ಉದ್ದೇಶಪೂರ್ವಕವಾಗಿಯೇ ಪ್ರಸಾದಕ್ಕೆ ವಿಷ ಬೆರೆಸಿ ದೇವಸ್ಥಾನಕ್ಕೆ ಕೆಟ್ಟ ಹೆಸರು ತರಲು ಕೆಲವರು ಇಂತಹ ಕೆಲಸ ಮಾಡಿದ್ದಾರೆ', 'ಕೆಲವರ ವಿರುದ್ಧ ಮಾಡಿರುವ ಸಂಚು ಇದು'.. ಹೀಗೆ ಒಂದೊಂದು ರೀತಿಯ ಆರೋಪಗಳು, ವಿಶ್ಲೇಷಣೆಗಳು ಹರಿದಾಡಿದವು.

ಈ ಬಗ್ಗೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ವಿ.ಎಂ.ರವಿಶಂಕರ್ ಅವರಿಗೆ ವಿಚಾರಿಸಿದರೆ, 'ಪ್ರಸಾದಕ್ಕೆ ವಿಷ ಬೆರೆಸಲಾಗಿದೆ ಎಂದು ಖಚಿತವಾಗಿ ಹೇಳಲಾಗದು. ಆದರೆ ಕೆಲವೊಮ್ಮೆ ಸಿದ್ಧಪಡಿಸಿದ ಆಹಾರ ಆರೇಳು ಗಂಟೆಗೂ ಅಧಿಕ ಹೊತ್ತು ಬಿಟ್ಟು ಸೇವಿಸಿದಾಗ, ಅಷ್ಟು ಹೊತ್ತಿಗೆ ಆ ಆಹಾರದಲ್ಲಿ ಬೆಳೆದ ಬ್ಯಾಕ್ಟೀರಿಯಾಗಳಿಂದ ಆಹಾರ ವಿಷವಾಗಿ ಹೊಟ್ಟೆ ನೋವು, ವಾಂತಿ, ಬೇಧಿ ಕಾಣಿಸಿಕೊಳ್ಳುತ್ತದೆ. ದೇಹದಲ್ಲಿರುವ ವಿಷದ ಅಂಶ ಸಂಪೂರ್ಣ ಹೊರ ಹೋಗುವವರೆಗೂ ಅಂತಹ ಆಹಾರ ತಿಂದವರು ಅಸ್ವಸ್ಥ ಸ್ಥಿತಿಯಲ್ಲಿ ಇರುತ್ತಾರೆ' ಎಂದು ಹೇಳಿದರು.

## ವಿಷ ಬೆರೆತ ಸಾಧ್ಯತೆ ಇಲ್ಲ

ಕೋಲಾರ: 'ಗಂಗಮ್ಮ ದೇವಸ್ಥಾನದಲ್ಲಿ ಭಕ್ತರು ಸೇವಿಸಿದ ಪ್ರಸಾದದಲ್ಲಿ ವಿಷ ಬೆರೆತಿರುವ ಸಾಧ್ಯತೆಯಿಲ್ಲ. ಬೆಳಿಗ್ಗೆ ಸಿದ್ಧಪಡಿಸಿದ್ದ ಪ್ರಸಾದವನ್ನು ಸಂಜೆ ವಿತರಿಸಲಾಗಿದೆ. ಪ್ರಸಾದ ಸಿದ್ಧವಾಗಿ ಹೆಚ್ಚು ಸಮಯವಾಗಿದ್ದರಿಂದ ಅದು ವಿಷಾಹಾರವಾಗಿ ಪರಿವರ್ತನೆಗೊಂಡಿರಬಹುದು. ಇಲ್ಲವೇ ಪ್ರಸಾದ ಸಿದ್ಧಪಡಿಸಿದ ಅಥವಾ ಅದನ್ನು ವಿತರಿಸಿದ ವ್ಯಕ್ತಿಗೆ ಸ್ಟ್ಯಾಫಿಲೋ ಕೋಕಸ್ ಸೋಂಕು ಇರುವ ಶಂಕೆಯಿದೆ. ಸ್ಟ್ಯಾಫಿಲೋ ಕೋಕಸ್ ಸೋಂಕು ಬ್ಯಾಕ್ಟೀರಿಯಾದಿಂದ ಬರುವ ಚರ್ಮ ರೋಗ' ಎಂದು ಆರ್.ಎಲ್.ಜಾಲಪ್ಪ ಆಸ್ಪತ್ರೆ ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಎಂ.ಎಸ್.ಲಕ್ಷ್ಮಯ್ಯ 'ಪ್ರಜಾವಾಣಿ'ಗೆ ತಿಳಿಸಿದರು.

'ಸ್ಟ್ಯಾಫಿಲೋ ಕೋಕಸ್ ಸೋಂಕಿನ ಬ್ಯಾಕ್ಟೀರಿಯಾ ಪ್ರಸಾದದ ಜತೆ ಭಕ್ತರ ಉದರ ಸೇರಿ ಪ್ರಸಾದವು ವಿಷಾಹಾರವಾಗಿ ಪರಿವರ್ತಿತವಾಗಿರುವ ಶಂಕೆ ಇದೆ. ಅಸ್ವಸ್ಥರ ಪೈಕಿ ಸರಸ್ವತಮ್ಮ ಸ್ಥಿತಿ ಗಂಭೀರವಾಗಿದೆ' ಎಂದು ಹೇಳಿದರು.